

ಮೆಣಸ್ಕಾಯಿ, ತೊಗರಿಪಾಯಸ, ಗುಜ್ಜೆ ಗಸಿ, ದೀಗುಜ್ಜೆ ಪೋಡಿಯ ಆಸೆಗೋ, ಆಟದ ದಿನ ಅವರ ಕುಚ್ಚೂರು ಮನೆಯ ಅಂಗಳದಲ್ಲಿ ಜನಜಾತ್ರೆಯೇ ಸೇರಿತ್ತು. ಆಟ ಮಾಡಿಸುವುದು ಅವರಿಗೇನೋ ಹೊಸತಲ್ಲ, ವರ್ಷಕ್ಕೊಂದು ಸಲ ಕುಚ್ಚೂರಿನಲ್ಲಿ ಅವರದ್ದೊಂದು ಆಟ ಇದ್ದೇ ಇರುತ್ತಿತ್ತು. ಆದರೆ ಅವರು ಪ್ರತೀ ವರ್ಷವೂ, 'ಸಂಪ್ರದಾಯ ಬಿಡಬಾರದು ಮಾರ್‍ರೆ, ಎಂದು ಪೌರಾಣಿಕ ಪ್ರಸಂಗವನ್ನೇ ಮಾಡಿಸುತ್ತಿದ್ದರು. ಆದರೆ ಅದೆಂತ ಪೌರಾಣಿಕ ಪ್ರಸಂಗವೇ ಆಗಿರಲಿ, ಎಲ್ಲೆಲ್ಲಿಂದಲೋ ಸೇರಿದವರು, ಗಟ್ಟಿ ಕೋಸುಂಬರಿ, ತೊಂಡೆ ಗೇರುಬೀಜ ಪಲ್ಯ, ಪೋಡಿ, ಪಾಯಸ, ಎಲ್ಲಾ ಮುಕ್ಕಿ ಆಟ ಶುರುವಾಗುವ ವೇಳೆಗೆ ಅರ್ಧಕ್ಕರ್ಧ ಜನ ಪರಾರಿಯಾಗುತ್ತಿದ್ದರು. ಪೌರಾಣಿಕ ಅಭಿರುಚಿ ಇರುವ ಒಂದಷ್ಟು ಪ್ರೇಕ್ಷಕರು ಮಾತ್ರ ಭಾರೀ ಉಮೇದಿನಿಂದ ಡೇರೆಯೊಳಗೆ ಸೇರುತ್ತಿದ್ದರು. ಕೆಲವರು, 'ಈ ಪ್ರಸಂಗ ನಂಗೆ ಗೊತ್ತುಂಟು, ಕಥೆ ಮೊದಲೇ ಗೊತ್ತುಂಟು ಇನ್ನೆಂತಕೆ ನೋಡುದು' ಎನ್ನುವ ನಿರುತ್ಸಾಹದಿಂದ, ಪಾಯಸಕ್ಕೆ ಮಾತ್ರ ತಮ್ಮ ಇದ್ದೆಲ್ಲಾ ಬೆರಳುಗಳನ್ನು ಮುಳುಗಿಸಿ ನೆಕ್ಕಿ ನೆಕ್ಕಿ, ಸಾಂಬಾರಿನ ನುಗ್ಗೆಕಾಯಿಯನ್ನು ಚೀಪಿ ಚೀಪಿ ಯಕ್ಷಗಾನದ ಚೆಂಡೆಗೂ ಸ್ಪರ್ಧೆ ಒಡ್ಡುವವರಂತೆ ಸದ್ದು ಮಾಡಿ ತಿಂದು, ಡೇರೆಯ ಆಚೀಚೆ ಒಂದಷ್ಟು ಹೊತ್ತು ಸುತ್ತುತ್ತ, ಅವರಿವರನ್ನು ನೋಡುತ್ತ ಕೊನೆಗೆ ಮನೆಯೆಂಬೋ ರಂಗಸ್ಥಳ ಸೇರುತ್ತಿದ್ದರು.

'ಈ ಕಾಲದಲ್ಲಿ ಯಾರು ಪೌರಾಣಿಕ ಪ್ರಸಂಗ ನೋಡ್ತಾರೆ ಮಾರ್‍ರೆ, ಸಾಮಾಜಿಕ ಅಥವಾ ಐತಿಹಾಸಿಕ ಪ್ರಸಂಗ ಆದ್ರೆ ಚೂರು ನೋಡ್ಬೋದಿತ್ತು' ಎಂದು ಕೆಲವರು ಹೇಳಿದ್ದ ಮಾತು ಅಣ್ಣಪ್ಪ ನಾಯ್ಕರಿಗೂ ಕೇಳಿಸಿತ್ತು. ಅದಕ್ಕೆ ಒಗ್ಗರಣೆ ಹಾಕುವಂತೆ ನಾಯಕ್ರೇ, 'ನಿಜ ಹೇಳ್ಬೇಕು ಅಂದ್ರೆ ಪೌರಾಣಿಕ ಪ್ರಸಂಗಕ್ಕೆ